ಸಂಖ್ಯೆ: ಡಿಬಿಸಿ/ಬೆಂನ/ಶುವಿ/CR- 15/2015-2016

ಜಿಲ್ಲಾ ಅಧಿಕಾರಿಗಳ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು. ದಿನಾಂಕ:27/10/2016

ಗೆ,
ಪ್ರಾಂಶುಪಾಲರು
--------ಎಲ್ಲರೂ
--------------
ಬೆಂಗಳೂರು ನಗರ ಜಿಲ್ಲೆ.

ಮಾನ್ಯರೇ,

**ವಿಷಯ:** 2015-16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಹೊಸ/ನವೀಕರಣ ವಿದ್ಯಾರ್ಥಿಗಳಿಗೆ ಮಂಜೂರಾಗಿರುವ ಶುಲ್ಕ ವಿನಾಯಿತಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಬಟವಾಡೆ ತ:ಖ್ತೆಯನ್ನು ಕಳುಹಿಸುವ ಕುರಿತು

**ಉಲ್ಲೇಖ:-**
1. BCWD/FC/RENEWAL/CR1(CSS)2015-16, DATE: 22/12/2015
2. BCWD/FC/RENEWAL/CR1(DNP)2015-16, DATE: 22/12/2015
3. BCWD/FC/FRESH/CR1(DNP)2015-16, DATE: 01/03/2016
4. BCWD/FC/FRESH/CR2(CSS)2015-16, DATE: 15/03/2016
5. BCWD/FC/FRESH/CR4(1516)CSS/2016-17, DATE: 11/07/2016
6. BCWD/FC/FRESH/CR4(1516)DNP/2016-17, DATE: 11/07/2016

*****

ವಿಷಯಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಶುಲ್ಕ ವಿನಾಯಿತಿ ಮಂಜೂರಾತಿಗಾಗಿ ಅರ್ಜಿಸಲ್ಲಿಸಿದ ವಿದ್ಯಾರ್ಥಿಗಳಿಗೆ ಈಗಾಗಲೇ ಶುಲ್ಕ ವಿನಾಯಿತಿ ಮಂಜೂರು ಮಾಡಲಾಗಿರುತ್ತದೆ. ಶುಲ್ಕ ವಿನಾಯಿತಿ ಮಂಜೂರಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ ಆದೇಶಗಳನ್ವಯ ಮಂಜೂರಾತಿ ಪಟ್ಟಿಯನ್ನು ನಿಮ್ಮ ಕಾಲೇಜಿನ ಲಾಗಿನ್‌ನಲ್ಲಿ ಅಳವಡಿಸಲಾಗಿರುತ್ತದೆ. ಮಂಜೂರಾಗಿರುವ ಮೊತ್ತಕ್ಕೆ ಅನುಗುಣವಾಗಿ ಕಾಲೇಜಿನ ಪ್ರಾಂಶುಪಾಲರ ಖಾತೆಗೆ ಈಗಾಗಲೇ ಹಣವನ್ನು ಆನ್‌ಲೈನ್ ಮೂಲಕ ಜಮಾ ಮಾಡಲಾಗಿದೆ.

ಅದರಂತೆ, ನಿಮ್ಮ ಕಾಲೇಜಿನ ಲಾಗಿನ್‌ನಿಂದ ಶುಲ್ಕ ವಿನಾಯಿತಿ ಮಂಜೂರಾತಿ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು ಅದರನ್ವಯ ಮಂಜೂರಾದ ವಿದ್ಯಾರ್ಥಿಗಳಿಗೆ ಹಣವನ್ನು ವಿತರಿಸಿ, ಬಟವಾಡೆ ತ:ಖ್ತೆಯನ್ನು ಈ ಕಛೇರಿಗೆ ಕಳುಹಿಸಲು ಕೋರಲಾಗಿದೆ.

ಈಗಾಗಲೇ 2016-17ನೇ ಸಾಲಿನ ಶುಲ್ಕ ವಿನಾಯಿತಿ ಮಂಜೂರಾತಿ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ, ಕೂಡಲೇ 2015-16ನೇ ಸಾಲಿನ ಬಟವಾಡೆ ತ:ಖ್ತೆಯನ್ನು ಈ ಪತ್ರ ತಲುಪಿದ 15 ದಿವಸದೊಳಗಾಗಿ ಕಳುಹಿಸಿಕೊಡಲು ಮತ್ತೊಮ್ಮೆ ಕೋರಿದೆ.

ಮುಂದುವರಿದು, 2016-17ನೇ ಸಾಲಿನ ಶುಲ್ಕವಿನಾಯಿತಿ, ವಿದ್ಯಾರ್ಥಿವೇತನ ಹಾಗೂ ವಿದ್ಯಾಸಿರಿ ಅರ್ಜಿಗಳನ್ನು ತಮ್ಮ ಕಾಲೇಜಿನ ಹಂತದಲ್ಲಿ ಕೂಡಲೇ ಪರಿಶೀಲಿಸಿ, ವಿದ್ಯಾರ್ಥಿಗಳು ಸಲ್ಲಿಸಿರುವ ಹಾರ್ಡ್‌ಕಾಪಿ ಅರ್ಜಿಗಳನ್ನು ಇಲಾಖೆಯ ಪರಿಶೀಲನಾಧಿಕಾರಿಗಳಿಗೆ ಪರಿಶೀಲನಾ ವರದಿ ಜೊತೆಗೆ ನೀಡಲು ಕೋರಿದೆ.